

# ಸುಂದರ ಪಾತ್ರಗಳ ಅಭೀಪ್ಸೆಯ ನಿವಿಷ್ಕಾ

**ಬೆಳಗಾವಿ ಹುಡುಗಿ ನಿವಿಷ್ಕಾ ಪಾಟೀಲ್, ಕಿರುತೆರೆ ಮುಖಾಂತರ ಸಿನಿಮಾಲೋಕದ ಮೆಟ್ಟಿಲು ತುಳಿದವರು. ಈಚೆಗೆ ತೆರೆಕಂಡ 'ಸೋಮು ಸೌಂಡ್ ಇಂಜಿನಿಯರ್' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿರುವ ಅವರಿಗೆ ತಮ್ಮನ್ನು ಸುಂದರ ಪಾತ್ರಗಳಲ್ಲಿ ಕಂಡುಕೊಳ್ಳುವ ಅಭಿಲಾಷೆ.**

ಬೆಳಗಾವಿ ಹುಡುಗಿ ನಿವಿಷ್ಕಾ ಪಾಟೀಲ್ ಓದು ಮುಂದುವರೆಸಲೆಂದು ಬೆಂಗಳೂರಿನ ಹಾದಿ ಹಿಡಿದವರು. ಆದರೆ ಅಚಾನಕ್ಕಾಗಿ ಒದಗಿಬಂದ ಧಾರಾವಾಹಿಯ ಅವಕಾಶ ಅವರ ಬದುಕಿನ ದಿಕ್ಕನ್ನು ತಿರುಗಿಸಿತ್ತು. ಕನ್ನಡ, ತಮಿಳು ಕಿರುತೆರೆಯಲ್ಲಿನ ಅನುಭವದೊಂದಿಗೆ ಸಿನಿಮಾ ಹಾದಿಗೆ ಹೊರಳಿ ಹಲವು ಚಿತ್ರಗಳಲ್ಲೂ ನಟಿಸಿರುವ ಅವರು, ಈಚೆಗೆ ತೆರೆಕಂಡ 'ಸೋಮು ಸೌಂಡ್ ಇಂಜಿನಿಯರ್' ಸಿನಿಮಾದಲ್ಲಿ ನಟಿಸಿದ್ದಾರೆ.

ಬೆಂಗಳೂರಿಗೆ ಬಂದ ನಿವಿಷ್ಕಾ ಅವರ ಮುಂದಿದ್ದುದು ಎರಡು ಆಯ್ಕೆ. ಒಂದು, ಓದುವುದು. ಮತ್ತೊಂದು ಬಿಸಿನೆಸ್ ಮಾಡುವುದು. ಈ ಎರಡರ ನಡುವೆ ಆಕಸ್ಮಿಕವಾಗಿ ಸಿಕ್ಕಿದ್ದು ನಟನೆಯ ಅವಕಾಶ.

'ನಟನೆಗೆ ಬರುತ್ತೇನೆ ಎಂಬ ಯಾವ ಆಲೋಚನೆಯೂ ನನ್ನಲ್ಲಿರಲಿಲ್ಲ. ಆದರೆ ಬೆಂಗಳೂರಿಗೆ ಬಂದ ನಂತರ ನನ್ನ ಸೋದರ ನನಗೆ ಗೊತ್ತಿಲ್ಲದೆಯೇ ಧಾರಾವಾಹಿಯೊಂದಕ್ಕೆ ನನ್ನ ಫೋಟೊ, ಪ್ರೊಫೈಲ್ ನೀಡಿದ್ದ. ಅದಕ್ಕೆ ಆಡಿಷನ್‌ಗೆ ಕರೆಬಂತು. ನನಗೆ ಆಶ್ಚರ್ಯ. ಅಲ್ಲಿ ಆಯ್ಕೆಯೂ ಆದೆ. ಆದರೆ ಧಾರಾವಾಹಿಯಲ್ಲಿ ನನ್ನ ಪಾತ್ರ ಪ್ರವೇಶಕ್ಕೆ ಇನ್ನೂ ಸಮಯ ಇದ್ದುದರಿಂದ ಧಾರಾವಾಹಿ ನಿರ್ದೇಶಕರು ನಟನೆಯ ತರಬೇತಿ ಪಡೆಯಲು ಸಲಹೆ ನೀಡಿದರು. ಸಮಯವನ್ನೂ ಉಪಯೋಗ ಮಾಡಿಕೊಳ್ಳುವ ಕಾರಣದಿಂದ ಉಷಾ ಭಂಡಾರಿ ಅವರ ನಟನಾ ತರಬೇತಿ ಶಾಲೆಗೆ ಸೇರಿಕೊಂಡೆ. ಅಲ್ಲಿ ನನಗೆ ನಟನೆಯ ಬಗ್ಗೆ ಆಸಕ್ತಿ ಬೆಳೆಯುತ್ತಾ ಸಾಗಿತು' ಎಂದು ತಮ್ಮ ಹಿನ್ನೆಲೆಯನ್ನು ವಿವರಿಸಿದರು.

ಇದೇ ಸಂದರ್ಭ, ಕಾಲೇಜು ದಿನಗಳಲ್ಲಿ ತಾವು 'ಮಿಸ್ ಬೆಳಗಾಂ' ಆಗಿದ್ದ ಸಂದರ್ಭವನ್ನೂ ನೆನಪಿಸಿಕೊಂಡರು. ಫ್ಯಾಷನ್ ಶೋಗಳಲ್ಲಿ ಭಾಗವಹಿಸುತ್ತಿದ್ದ ಅವರು, 'ಮಿಸ್ ಬೆಳಗಾಂ' ಆಗಿ ಸ್ಪರ್ಧೆಯಲ್ಲಿ ಗೆದ್ದಾಗ ಸ್ಥಳೀಯ ಪತ್ರಿಕೆಗಳಲ್ಲಿ ತಮ್ಮ ಫೋಟೊ ನೋಡಿ, ಗೆಳೆಯರು ಸಿನಿಮಾಗಳಲ್ಲಿ ಅಭಿನಯಿಸುವ ಸಲಹೆ ನೀಡಿದ್ದನ್ನೂ ನೆನಪಿಸಿಕೊಂಡರು.

ನಟನಾ ತರಬೇತಿ ಪಡೆಯುವಾಗ 'ಮಾನಸ ಸರೋವರ' ಧಾರಾವಾಹಿಯಲ್ಲಿ ನಟಿಸುವ ಅವಕಾಶ ನಿವಿಷ್ಕಾಗೆ ಒಲಿದುಬಂತು. ಆತಂಕ, ಭಯದಿಂದಲೇ ಮೊದಲ ಹೆಜ್ಜೆ ಇಟ್ಟ ಅವರಿಗೆ ಶ್ರೀನಾಥ್, ರಾಮಕೃಷ್ಣ, ಪದ್ಮಾವಾಸಂತಿ ಅವರಂಥ ಹಿರಿಯ ಕಲಾವಿದರ ಸಲಹೆಗಳು ಬಹಳ ಉಪಯುಕ್ತವಾದವು. ಈ ಧಾರಾವಾಹಿಯಲ್ಲಿ ನಟಿಸುವಾಗಲೇ ತಮಿಳು ಧಾರಾವಾಹಿಯೊಂದರ ಅವಕಾಶವೂ ಕೈ ಸೇರಿತು. ನಟಿ ಖುಷ್ಬು ಅವರ ಪ್ರೊಡಕ್ಷನ್‌ನಲ್ಲಿ 'ಲಕ್ಷ್ಮೀ ಸ್ಟೋರ್ಸ್' ಎಂಬ ತಮಿಳು ಸೀರಿಯಲ್‌ನಲ್ಲಿ ನಟಿಸಿದರು. ಅಷ್ಟರಲ್ಲಿ ಮತ್ತೊಂದಿಷ್ಟು ಅವಕಾಶಗಳು ಹುಡುಕಿ ಬಂದವು.

'ಕಿರುತೆರೆ ನನಗೆ ಬದುಕು ನೀಡಿದೆ. ಕಟ್ಟಡ ಕಟ್ಟಬೇಕಾದರೆ ಪಾಯ ಗಟ್ಟಿಯಿರಬೇಕು. ಹಾಗೇ ಸಿನಿಮಾ ಬದುಕಿನಲ್ಲಿಯೂ ಮೂಲ ಗಟ್ಟಿಯಿರಬೇಕು. ಆ ಮೂಲ ನನಗೆ ಕಿರುತೆರೆಯೇ ಆಗಿದೆ. ಧಾರಾವಾಹಿ ಮಾಡದೇ ನೇರ ಸಿನಿಮಾಗೆ ಬಂದಿದ್ದರೆ ಬಹುಶಃ ತುಂಬಾ ಕಷ್ಟ ಆಗುತ್ತಿತ್ತು. ನಟಿಸುವುದು, ಸಂವಹನ, ಸಮಯ ನಿರ್ವಹಣೆ, ತಾಂತ್ರಿಕ ಕಲಿಕೆ ಇವೆಲ್ಲ ಸಲೀಸಾಗಿ ಕಲಿಯಲು ಸಾಧ್ಯವಾಗಿದ್ದು ಧಾರಾವಾಹಿಯಲ್ಲಿ. ಸಿನಿಮಾದಲ್ಲಿ ತಪ್ಪು ತಿದ್ದುಕೊಳ್ಳಲು ಅವಕಾಶ ಕಡಿಮೆ' ಎಂದು ನೆನಪಿಸಿಕೊಳ್ಳುತ್ತಾರೆ ನಿವಿಷ್ಕಾ.

ಕಿರುತೆರೆಯಿಂದ ಸಿನಿಮಾದತ್ತ ಹೊರಳಲು ಆಲೋಚಿಸುತ್ತಿದ್ದ ಸಮಯದಲ್ಲೇ ಅವರಿಗೆ ಸಿಕ್ಕಿದ್ದು 'ಬೆಂಕಿ' ಸಿನಿಮಾ. ಅನೀಶ್ ಅವರ ಈ ಸಿನಿಮಾದಲ್ಲಿ ಮಾಡಿದ ಪಾತ್ರ ಸಿನಿಮಾರಂಗಕ್ಕೆ ಅಗತ್ಯವಾದ ಆತ್ಮವಿಶ್ವಾಸ ನೀಡಿತ್ತು. 'ಬೆಂಕಿ', 'ಮರೀಚಿ' ಸಿನಿಮಾಗಳಲ್ಲಿ ಅಭಿನಯಿಸಿದರು. 'ಸೋಮು ಸೌಂಡ್ ಇಂಜಿನಿಯರ್' ಸಿನಿಮಾಗೆ ಉತ್ತರ ಕರ್ನಾಟಕ ಮೂಲದ ನಟಿಯ ಹುಡುಕಾಟದಲ್ಲಿದ್ದಾಗ ನಿವಿಷ್ಕಾ ಹೆಸರೇ ಸೂಕ್ತವೆನಿಸಿ ನಟಿಸುವ ಅವಕಾಶ ಸಿಕ್ಕಿತು.

ನಟನೆಗೆ ಹೆಚ್ಚು ಅವಕಾಶವಿರುವ ಸಿನಿಮಾಗಳಲ್ಲಿ ಅಭಿನಯಿಸಬೇಕು. ನಿರ್ದೇಶಕರ ಕಲ್ಪನೆಗೆ ತಕ್ಕಂತೆ, ಅವರ ಕಲ್ಪನೆಗೂ ಮೀರಿ ಚೆನ್ನಾಗಿ ನಟಿಸಬೇಕು. ಇವರನ್ನು ಸಿನಿಮಾಗೆ ಹಾಕಿಕೊಂಡರೆ ಸಿನಿಮಾ ಚೆನ್ನಾಗಿರುತ್ತದೆ ಎನ್ನುವ ವಿಶ್ವಾಸವನ್ನು ಚಿತ್ರರಂಗದಲ್ಲಿ ಮೂಡಿಸುವಂಥ ಸುಂದರ ಪಾತ್ರಗಳು ಬೇಕೆನ್ನುವುದು ನಿವಿಷ್ಕಾ ಅಭಿಲಾಷೆ.

ಸದ್ಯ ನಿವಿಷ್ಕಾ ಅಭಿನಯದ 'ಜಾಂಟಿ S/O ಜಯರಾಜ್', 'ಕಲ್‌ಸಕ್ರೆ' ಎರಡು ಸಿನಿಮಾಗಳು ಬಿಡುಗಡೆಯಾಗಬೇಕಿವೆ. ತೆಲುಗು ಸಿನಿಮಾವೊಂದರಲ್ಲೂ ಕಾಣಿಸಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದಾರೆ.